ಆ) ಸರ್ಕಾರಿ ಆದೇಶದಂತೆ ಓ.ವೈ.ಓ.ಎಸ್.ಎಸ್. ಅಡಿಯಲ್ಲಿ ಮಳಿಗೆಗಳನ್ನು ಉಚಿತವಾಗಿ ಬಡ್ಡಿ ಇಲ್ಲದೆ, ಹಂಚಿಕೆ ಸಮಯದಲ್ಲಿನ ಮೂಲ ಬೆಲೆಗೆ ನೀಡಲು ಅವಕಾಶವಿರುವುದಿಲ್ಲ.

ಇ) ಸರ್ಕಾರಿ ಆದೇಶ ಸಂಖ್ಯೆ: ಸಿಐ 93 ಸಿಎಸ್‌ಸಿ 2005 ದಿನಾಂಕ: 28–03–2005 ರಂತೆ ಓ.ವೈ.ಓ.ಎಸ್.ಎಸ್. ಯೋಜನೆಯಡಿಯಲ್ಲಿ ಹಂಚಿಕೆಯಾಗಿರುವ ಮಳಿಗೆಗಳ ಹಂಚಿಕೆದಾರರಿಗೆ ಶೇ.11 ಮತ್ತು ಶೇ.8 ರಂತೆ (ಕ್ರಮವಾಗಿ 1980 ಮತ್ತು 1988ರ ಸರ್ಕಾರಿ ಆದೇಶಗಳ ಅಡಿಯಲ್ಲಿ ಹಂಚಿಕೆಯಾಗಿರುವ ಮಳಿಗೆಗಳಿಗೆ) ಬಡ್ಡಿಯನ್ನು ಆಕರಿಸಲಾಗುತ್ತಿದೆ.

453 ಶ್ರೀ ಕೃಷ್ಣ ಮೂರ್ತಿ ಕೆ.ಎಂ. (ಕಡೂರು) : ಮಾನ್ಯ ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಸಕರ ಪ್ರದೇಶಾಭಿವೃದ್ಧಿ ನಿಧಿಯನ್ನು ಸರ್ಕಾರ ಇದುವರೆಗೂ ಸಮರ್ಪಕವಾಗಿ ಬಿಡುಗಡೆ ಮಾಡದಿರಲು ಕಾರಣವೇನು;

ಆ) ಸರ್ಕಾರವು ಈ ಸಾಲಿನಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ಅನುದಾನವನ್ನು ಹೆಚ್ಚಿಸುವ ಕ್ರಮ ಕೈಗೊಳ್ಳಲಿದೆಯೇ? ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ಹೆಚ್ಚಿಸಲಾಗುವುದು?

ಶ್ರೀ ಗೋವಿಂದ ಎಂ.ಕಾರಜೋಳ (ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು) :

ಅ) 2008–09ನೇ ಸಾಲಿನಲ್ಲಿ ರೂ.200.00 ಕೋಟಿಗಳನ್ನು ಆಯವ್ಯಯದಲ್ಲಿ ನಿಗದಿಪಡಿಸಲಾಗಿತ್ತು. ರೂ.150.00 ಕೋಟಿಗಳನ್ನು ಶಾಸಕರಿಗೆ ತಲಾ ರೂ.50.00 ಲಕ್ಷದಂತೆ ಬಿಡುಗಡೆ ಮಾಡಲಾಯಿತು. ಪೂರಕ ಅಂದಾಜಿನಲ್ಲಿ ರೂ.100.00 ಕೋಟಿಗಳನ್ನು ಆರ್ಥಿಕ ಇಲಾಖೆಯು ಒದಗಿಸಿತು. ಆದರೆ, ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದರಿಂದ 2ನೇ ಕಂತಿನ ಅನುದಾನದ ತಲಾ ರೂ.50.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಲಿಲ್ಲ.

ಹಾಗಿದ್ದರೂ, 2009–10ನೇ ಸಾಲಿನಲ್ಲಿ ರೂ.350.00 ಕೋಟಿಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದ್ದು (ಕಳೆದ ವರ್ಷದ ರೂ.150.00

ಕೋಟಿಗಳನ್ನು ಸೇರಿ) ಇಲ್ಲಿಯವರೆಗೆ ರೂ.300.00 ಕೋಟಿಗಳನ್ನು ಶಾಸಕರಿಗೆ ತಲಾ ರೂ.1.00 ಕೋಟಿಯಂತೆ ಬಿಡುಗಡೆ ಮಾಡಲಾಗಿದೆ.

ಆ) ಯಾವುದೇ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.

331 ಶ್ರೀ ಅಮರೇಶ್ : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಗರ್ ಹುಕುಂ ಸಮಿತಿಯಲ್ಲಿ ಮಂಜೂರಾದ ಫಲಾನುಭವಿಗಳಿಗೆ ಸಾಗುವಳಿ ಚೀಟಿ ಹಂಚಿಕೆಯಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ತ್ವರಿತವಾಗಿ ಸಾಗುವಳಿ ಚೀಟಿ ವಿತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಹೌದು.

ಆ) ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97(1) ರಲ್ಲಿ ನಿರ್ದಿಷ್ಟ ಪಡಿಸಿರುವ ವಿಸ್ತೀರ್ಣಕ್ಕಿಂತ ಕಡಿಮೆ ಇರುವ ಗೋಮಾಳ ಜಮೀನಿನಲ್ಲಿ ಮತ್ತು ಅರಣ್ಯ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವವರಿಗೆ ಸಾಗುವಳಿ ಚೀಟಿ ನೀಡಲು ಅವಕಾಶವಿರುವುದಿಲ್ಲ. ಇನ್ನುಳಿದಂತಹ ಕಿಮ್ಮತ್ತು ಪಾವತಿಸಬೇಕಾಗಿರುವ ಪ್ರಕರಣಗಳಲ್ಲಿ, ಕಿಮ್ಮತ್ತು ಪಾವತಿಸಿದ ನಂತರ ಸಾಗುವಳಿ ಚೀಟಿ ನೀಡಬಹುದಾಗಿದೆ. ಅದರಂತೆ ಕ್ರಮ ಕೈಗೊಳ್ಳಲು ಸುತ್ತೋಲೆ ಸಂಖ್ಯೆ: ಆರ್‌ಡಿ 57 ಎಲ್‌ಜಿಪಿ 2008, ದಿ: 20.08.2009 ರಲ್ಲಿ ಸೂಚನೆಗಳನ್ನು ನೀಡಲಾಗಿರುತ್ತದೆ.

310 ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಸಣ್ಣ ನೀರಾವರಿ, ಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ: ಡಿ.ಎಂ. ನಂಜುಂಡಪ್ಪರವರ ವರದಿ ಅನ್ವಯ ಪ್ರಾದೇಶಿಕ ಅಸಮತೋಲನ ಅನುಷ್ಠಾನ ಸಮಿತಿಯು ನೀಡಿರುವ ಕಾರ್ಯಕ್ರಮಗಳೇನು, ಹಾಗಿದ್ದಲ್ಲಿ ಕಾರ್ಯಕ್ರಮಗಳಿಗೆ ಸರ್ಕಾರವು ಆಯವ್ಯಯದಲ್ಲಿ ನಿಗದಿಪಡಿಸಿರುವ ಮೊತ್ತವೆಷ್ಟು?